# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1148 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಎಂ. ಮಧು ಜಿ. ಮಾದೇಗೌಡ ( ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 13-03-2026 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯ ಮಹಿಳಾ ಆಯೋಗಕ್ಕೆ ರಾಜ್ಯ ಸರ್ಕಾರ, ಸರ್ಕಾರದ ಅಧೀನ ಸಂಸ್ಥೆಗಳಲ್ಲಿ ಹಾಗೂ ಇತರ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಷ್ಟು ಮಂದಿ ಮಹಿಳಾ ನೌಕರರು ಕೆಲಸದ ಸ್ಥಳದಲ್ಲಿ ತಮ್ಮ ಮೇಲೆ ಆಗುತ್ತಿರುವ ಅನುಚಿತ ವರ್ತನೆ, ಲೈಂಗಿಕ ಮತ್ತು ಮಾನಸಿಕ ಕಿರುಕುಳ ಕುರಿತು ದೂರು ಸಲ್ಲಿಸಿದ್ದಾರೆ; (ಕಳೆದ 3 ವರ್ಷಗಳಲ್ಲಿ ಇಲಾಖಾವಾರು/ ಇತರ ಸಂಸ್ಥೆಗಳಲ್ಲಿ ದಾಖಲಿಸ್ಪಟ್ಟ ದೂರುಗಳ ಸಂಖ್ಯೆಯನ್ನು ವರ್ಷವಾರು ನೀಡುವುದು) | ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಿದೆ. |
| ಆ | ಒಟ್ಟು ದೂರುಗಳ ಪೈಕಿ ಎಷ್ಟು ಪ್ರಕರಣಗಳನ್ನು ಮುಕ್ತಾಯಗೊಳಿಸಲಾಗಿದೆ; ಈ ಪೈಕಿ ಸಾಬೀತಾದ ಅಥವಾ ಸಾಬೀತಾಗದ ಪ್ರಕರಣಗಳ ಸಂಖ್ಯೆ ಹಾಗೂ ವಿಚಾರಣೆ ಹಂತದಲ್ಲಿರುವ ಪ್ರಕರಣಗಳು ಎಷ್ಟು; (ಇಲಾಖೆ, ದೂರು ದಾಖಲಾದ ದಿನಾಂಕ, ಮುಕ್ತಾಯಗೊಳಿಸಿದ ದಿನಾಂಕದೊಂದಿಗೆ ವರ್ಷವಾರು ವಿವರ ನೀಡುವುದು) | ಮಾಹಿತಿಯನ್ನು ಅನುಬಂಧ-2 ರಲ್ಲಿ ಒದಗಿಸಿದೆ. |
| ಇ | ಕೆಲವು ಕಚೇರಿ/ಇಲಾಖೆ/ಸಂಸ್ಥೆಗಳಲ್ಲಿ 'ಆಂತರಿಕ ದೂರು ನಿರ್ವಹಣಾ ಸಮಿತಿ' ರಚಿಸದಿರುವುದು ಹಾಗೂ ವರ್ಗಾವಣೆ, ನಿವೃತ್ತಿ ಮತ್ತಿತರೆ ಕಾರಣಕ್ಕೆ ಸದಸ್ಯರು ಹೊರಗಿದ್ದರೂ ಸಮಿತಿಯನ್ನು ಪುನರ್ ರಚಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರದ ಕ್ರಮವೇನು; | ಈಗಾಗಲೇ ಎಲ್ಲಾ 31 ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸರ್ಕಾರದಿಂದ ಹಾಗೂ ಆಯೋಗದಿಂದ ಪತ್ರ ಬರೆಯಲಾಗಿದೆ ಹಾಗೂ POSH 2013ರ ಅಧಿನಿಯಮದಂತೆ ಪ್ರತಿ 3 ವರ್ಷಕ್ಕೊಮ್ಮೆ ಆಂತರಿಕ ಸಮಿತಿಯನ್ನು ಪುನರ್ ರಚಿಸಲು ತಿಳಿಸಲಾಗಿದೆ. ವರ್ಗಾವಣೆ/ನಿವೃತ್ತಿಯಿಂದ ಖಾಲಿಯಾದ ಸ್ಥಾನಕ್ಕೆ ಬೇರೊಬ್ಬರನ್ನು ನೇಮಿಸಲು ತಿಳಿಸಲಾಗಿದೆ. ಇದನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಹಾಗೂ ಇಲಾಖಾ ಮುಖ್ಯಸ್ಥರು ಸೂಕ್ತ ಕ್ರಮವಹಿಸುತ್ತಾರೆ. |
| ಈ | ಈ ರೀತಿಯ ದೂರುಗಳನ್ನು ಎಷ್ಟು ದಿನದೊಳಗೆ ವಿಚಾರಣೆ ಮತ್ತು ತೀರ್ಮಾನ ಮಾಡಲು ಕ್ರಮ ಕೈಗೊಳ್ಳಲಾಗುವುದು; | POSH 2013ರ ಅಧಿನಿಯಮದ ಅಡಿಯಲ್ಲಿ 90 ದಿನಗಳ ಕಾಲಾವಕಾಶದೊಳಗಾಗಿ ವಿಚಾರಣೆ ಪೂರ್ಣಗೊಳಿಸಬೇಕು. |
| ಉ | ದೂರು ದಾಖಲಾಗಿ ಒಂದು ವರ್ಷ ಮೇಲ್ಪಟ್ಟಿದ್ದರೂ ವಿಚಾರಣೆ ಪೂರ್ಣಗೊಳ್ಳದ ಅಥವಾ ಮುಕ್ತಾಯಗೊಳಿಸದ ಪ್ರಕರಣಗಳೆಷ್ಟು? (ವಿವರ ನೀಡುವುದು) | ದೂರು ದಾಖಲಾಗಿ ಒಂದು ವರ್ಷ ಮೇಲ್ಪಟ್ಟಿದ್ದರೂ ವಿಚಾರಣೆ ಪೂರ್ಣಗೊಳ್ಳದ ಅಥವಾ ಮುಕ್ತಾಯಗೊಳಿಸದ ಪ್ರಕರಣಗಳು ಯಾವುದು ಇರುವುದಿಲ್ಲ. |

ಸಂಖ್ಯೆ: ಡಬ್ಲ್ಯೂಸಿಡಿ 34 ಡಬ್ಲ್ಯೂಡಿಸಿ 2026

(ಲಕ್ಷ್ಮೀ ಆರ್. ಹೆಬ್ಬಾಳ್ಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರೀಕರ
ಸಬಲೀಕರಣ ಸಚಿವರು

**ಅನುಬಂಧ-1**

## ಕರ್ನಾಟಕ ರಾಜ್ಯ ಮಹಿಳಾ ಆಯೋಗ

| ಕ್ರಸಂ | ಪ್ರಕರಣಗಳ ವಿವರ | 2023-24 | | | 2024-25 | | | 2025-26 (ಏಪ್ರಿಲ್-ಜನವರಿ 2026 ರವರೆಗೆ) | | |
|---|---|---|---|---|---|---|---|---|---|---|
| | | ಸ್ವೀಕೃತಿ | ಮುಕ್ತಾಯ | ಚಾಲ್ತಿ | ಸ್ವೀಕೃತಿ | ಮುಕ್ತಾಯ | ಚಾಲ್ತಿ | ಸ್ವೀಕೃತಿ | ಮುಕ್ತಾಯ | ಚಾಲ್ತಿ |
| 1 | ಕೌಟುಂಬಿಕ ದೌರ್ಜನ್ಯ | 434 | 434 | 0 | 458 | 450 | 8 | 668 | 472 | 196 |
| 2 | ರಕ್ಷಣೆ | 586 | 586 | 0 | 943 | 943 | 0 | 1289 | 1287 | 2 |
| 3 | ವರದಕ್ಷಿಣೆ ಕಿರುಕುಳ | 121 | 121 | 0 | 112 | 112 | 0 | 141 | 77 | 64 |
| 4 | ವರದಕ್ಷಿಣೆ ಸಾವು (ಆತ್ಮಹತ್ಯೆ/ಕೊಲೆ) | 1 | 1 | 0 | 3 | 3 | 0 | 0 | 0 | 0 |
| 5 | ಅತ್ಯಾಚಾರ | 7 | 7 | 0 | 7 | 7 | 0 | 6 | 3 | 3 |
| 6 | ಅತ್ಯಾಚಾರದಿಂದ ಸಾವು | 0 | 0 | 0 | 0 | 0 | 0 | 0 | 0 | 0 |
| 7 | ಲೈಂಗಿಕ ಕಿರುಕುಳ | 26 | 26 | 0 | 29 | 29 | 0 | 30 | 5 | 25 |
| 8 | ಕೆಲಸದ ಸ್ಥಳದಲ್ಲಿ ಕಿರುಕುಳ | 95 | 95 | 0 | 131 | 119 | 12 | 123 | 51 | 72 |
| 9 | ಪ್ರೇಮ ಪ್ರಕರಣ | 29 | 29 | 0 | 45 | 45 | 0 | 62 | 45 | 17 |
| 10 | ಜೀವನಾಂಶ | 7 | 7 | 0 | 3 | 3 | 0 | 7 | 7 | 0 |
| 11 | ಮಕ್ಕಳ ಅಭಿರಕ್ಷೆ, ಪೋಷಕರ ಭೇಟಿ | 0 | 0 | 0 | 0 | 0 | 0 | 0 | 0 | 0 |
| 12 | ವಸತಿ ಕಲ್ಪಿಸುವ ಬಗ್ಗೆ | 0 | 0 | 0 | 0 | 0 | 0 | 1 | 1 | 0 |
| 13 | ಆಸ್ತಿ ವಿವಾದ | 53 | 53 | 0 | 49 | 49 | 0 | 104 | 103 | 1 |
| 14 | ಪೋಲಿಸ್ ದೌರ್ಜನ್ಯ | 39 | 39 | 0 | 43 | 39 | 4 | 48 | 37 | 11 |
| 15 | ಹಣ ವಂಚನೆ | 25 | 25 | 0 | 22 | 22 | 0 | 55 | 53 | 2 |
| 16 | ವಿಚ್ಛೇಧನೆ | 4 | 4 | 0 | 4 | 4 | 0 | 6 | 5 | 1 |
| 17 | ಜಾತಿ ನಿಂದನೆ | 0 | 0 | 0 | 0 | 0 | 0 | 3 | 3 | 0 |
| 18 | ಸೈಬರ್ ಕ್ರೈಂ | 0 | 0 | 0 | 4 | 4 | 0 | 2 | 2 | 0 |
| 19 | ಇತರೆ | 752 | 752 | 0 | 1054 | 1028 | 26 | 1937 | 1725 | 212 |
| | ಒಟ್ಟು | 2179 | 2179 | 0 | 2907 | 2857 | 50 | 4482 | 3876 | 606 |

**ಅನುಬಂಧ-2**

## ಕರ್ನಾಟಕ ರಾಜ್ಯ ಮಹಿಳಾ ಆಯೋಗದಲ್ಲಿ ಏಪ್ರಿಲ್ 2025 ರಿಂದ ಜನವರಿ-2026ರವರೆಗಿನ ಮಾಹಿತಿ

| ಕ್ರಸಂ | ಪ್ರಕರಣಗಳ ವಿವರ | ಸ್ವೀಕೃತಿ | ಮುಕ್ತಾಯ | ಚಾಲ್ತಿ |
|---|---|---|---|---|
| 1 | ಕೌಟುಂಬಿಕ ದೌರ್ಜನ್ಯ | 668 | 472 | 196 |
| 2 | ರಕ್ಷಣೆ | 1289 | 1287 | 2 |
| 3 | ವರದಕ್ಷಿಣೆ ಕಿರುಕುಳ | 141 | 77 | 64 |
| 4 | ವರದಕ್ಷಿಣೆ ಸಾವು (ಆತ್ಮಹತ್ಯೆ/ಕೊಲೆ) | 0 | 0 | 0 |
| 5 | ಅತ್ಯಾಚಾರ | 6 | 3 | 3 |
| 6 | ಅತ್ಯಾಚಾರದಿಂದ ಸಾವು | 0 | 0 | 0 |
| 7 | ಲೈಂಗಿಕ ಕಿರುಕುಳ | 30 | 5 | 25 |
| 8 | ಕೆಲಸದ ಸ್ಥಳದಲ್ಲಿ ಕಿರುಕುಳ | 123 | 51 | 72 |
| 9 | ಪ್ರೇಮ ಪ್ರಕರಣ | 62 | 45 | 17 |
| 10 | ಜೀವನಾಂಶ | 7 | 7 | 0 |
| 11 | ಮಕ್ಕಳ ಅಭಿರಕ್ಷೆ, ಪೋಷಕರ ಭೇಟಿ | 0 | 0 | 0 |
| 12 | ವಸತಿ ಕಲ್ಪಿಸುವ ಬಗ್ಗೆ | 1 | 1 | 0 |
| 13 | ಆಸ್ತಿ ವಿವಾದ | 104 | 103 | 1 |
| 14 | ಪೋಲಿಸ್ ದೌರ್ಜನ್ಯ | 48 | 37 | 11 |
| 15 | ಹಣ ವಂಚನೆ | 55 | 53 | 2 |
| 16 | ವಿಚ್ಛೇಧನೆ | 6 | 5 | 1 |
| 17 | ಜಾತಿ ನಿಂದನೆ | 3 | 3 | 0 |
| 18 | ಸೈಬರ್ ಕ್ರೈಂ | 2 | 2 | 0 |
| 19 | ಇತರೆ | 1937 | 1725 | 212 |
| ಒಟ್ಟು | | 4482 | 3876 | 606 |